3) ಕೌಟುಂಬಿಕ ಕಲಹದಿಂದಾಗಿ ದಿಕ್ಕು ತಪ್ಪಿದ ಮಹಿಳೆಯರಿಗೆ ತಾತ್ಕಾಲಿಕ ನೆಲೆಯನ್ನು ಒದಗಿಸುವುದು.

ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೂ ಸೂಕ್ತ ಸಹಾಯವನ್ನು ನೀಡುವುದು ಸಹ ಈ ಸಹಾಯವಾಣಿಯ ಉದ್ದೇಶವಾಗಿದೆ. ಈ ಮಹಿಳೆಯರೂ ಯಾವುದೇ ರೀತಿಯ ಶೋಷಣೆ, ಹಿಂಸೆಯ ಬಗ್ಗೆ ದೂರನ್ನು ನೀಡಬಹುದು. ಅಂತಹ ದೂರುಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸಂಸದರಿಗೆ ಸೌಲಭ್ಯ.

995(1301) ಶ್ರೀ ಶಿವಾನಂದ ನಾಯಕ (ಬಿಟ್ಟಳ್ಳಿ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದ ಸಂಸತ್ ಸದಸ್ಯರುಗಳಿಗೆ ರಾಜ್ಯ ಸರ್ಕಾರವು ಒದಗಿಸಿರುವ ಸೌಲಭ್ಯಗಳು ಯಾವುವು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

ಅ) ದಿನಾಂಕ 26-06-1993ರ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 153 ಶಿವಾನೀ 93 ರಲ್ಲಿ ಸಂಸತ್ ಸದಸ್ಯರುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

1) ಸಂಸತ್ ಸದಸ್ಯರುಗಳು ಸಂದರ್ಶನ ಮತ್ತು ಕಾರ್ಯಕಲಾಪಗಳನ್ನು ನಿರ್ವಹಿಸಲು ಒಂದು ಕೊಠಡಿ;

2) ಒಬ್ಬ ಶೀಘ್ರಲಿಪಿಗಾರರು;

3) ವಾಹನ ಹಾಗೂ ವಾಹನ ಚಾಲಕರು.

ವಿದ್ಯುತ್ ಸಂಪರ್ಕ ಸಕ್ರಮ.

996(783) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಕ್ರಮ ವಿದ್ಯುತ್ ಸಂಪರ್ಕಗಳನ್ನು ಯಾವ ದಿನಾಂಕದವರೆಗೆ ಸಕ್ರಮಗೊಳಿಸಲಾಗುವುದು, ಇದರಿಂದ ಸರ್ಕಾರಕ್ಕೆ ಆದ ನಷ್ಟ ಅಥವಾ ಲಾಭವೆಷ್ಟು?

ಆ) ಈ ರೀತಿ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸುವುದರಿಂದ ವಿದ್ಯುತ್ ಸಂಪರ್ಕ ವ್ಯವಸ್ಥೆಗಳಲ್ಲಿ ಆಗುವ ತೊಂದರೆಗಳ ಬಗ್ಗೆ ಸರ್ಕಾರ ಮಹಿಸಿರುವ ಪರ್ಯಾಯ ವ್ಯವಸ್ಥೆಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂದನ ರಾಜ್ಯ ಸಚಿವರು) :—

ಅ) ಅಕ್ರಮವಾಗಿ ಸಂಪರ್ಕಗಳನ್ನು ಪಡೆದ ನೀರಾವರಿ ಪಂಪ್‌ಸೆಟ್ಟುಗಳನ್ನು ಸಕ್ರಮೀಕರಣಗೊಳಿಸಲು ನಿಗದಿಪಡಿಸಲಾಗಿದ್ದ ಅಂತಿಮ ದಿನಾಂಕ: 26-3-99. ಈ ಸಕ್ರಮೀಕರಣದ ಬಾಬ್ತು ಮಂಡಡಳಿಯು 26-3-99ರ ಅಂತ್ಯಕ್ಕೆ, ಒಟ್ಟು 34.77 ಕೋಟಿ ರೂ.ಗಳ ಶಲ್ಕವನ್ನು ವಸೂಲು ಮಾಡಲಾಗಿದೆ. ಈ ಮೊತ್ತವು ಸಕ್ರಮೀಕರಣದ ಬಗ್ಗೆ ವಸೂಲು ಮಾಡಿದ ಹಣವಾದ್ದರಿಂದ ಇದರಲ್ಲಿ, ಲಾಭ ಅಥವಾ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಮಂಡಳಿಯು ವಿದ್ಯುತ್ ಮಾರ್ಗಗಳ ಬಲವರ್ಧನೆ ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದರ ಮೂಲಕ ಅಕ್ರಮ ನೀರಾವರಿ ಪಂಪುಸೆಟ್ಟುಗಳ ಸಂಪರ್ಕಗಳನ್ನು ಸಕ್ರಮಗೊಳಿಸುವುದರಿಂದ ಸಂಪರ್ಕ ವ್ಯವಸ್ಥೆಗಳಲ್ಲಿ ಆದ ತೊಂದರೆಯನ್ನು ನಿವಾರಿಸಲು ಕ್ರಮಕ್ಕೆಗೊಳ್ಳಲಾಗುತ್ತಿದೆ.

ಅಂತರ್ಜಲ ಅಭಿವೃದ್ಧಿ.

997(1437) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಂತರ್ಜಲ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ;

ಆ) ಈ ಕಾರ್ಯಕ್ರಮಗಳಿಗೆ 1996-97, 1997-98 ಮತ್ತು 1998-99 ಸಾಲಿನಲ್ಲಿ ಒದಗಿಸುದ ಯೋಜನಾ ವೆಚ್ಚವೆಷ್ಟು; (ಜಿಲ್ಲಾವಾರು ವಿವರ ಒದಗಿಸುವುದು) ಖರ್ಚಾದ ಹಣವೆಷ್ಟು?

ಶ್ರೀ ತಿಪ್ಪಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :—

ಅ) ಅಂತರ್ಜಲ ಅಭಿವೃದ್ಧಿ ಸಲುವಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಅಂತರ್ಜಲ ಕೃತಕ ಮರು ಪೂರ್ಣಕ್ಕೆ ರಚನೆಗಳಾದ ಅಣ್ಣಗೋಡಿ, ಇಂಗು ಬಾವಿ, ಕೃತಕ ಹೈಕ್ ಹಾಗೂ ಗೋಕಟ್ಟೆಗಳಲ್ಲಿ ಹೂಳೆತ್ತುವ ನಿರ್ಮಾಣದ ಕಾರ್ಯಕ್ರಮಗಳನ್ನು ಪ್ರಯೋಗಾತ್ಮಕವಾಗಿ ಹಮ್ಮಿಕೊಂಡಿದೆ.

ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.